# *Form No.4.*

# *Deposition Sheet( R.P.52)*

ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

**CC 208/2024**

**CW-1**

**PW-1**

| | | |
|---|---|---|
| ಸಾಕ್ಷಿಯ ಹೆಸರು | ಃ | ಮೋಹನ್ ದಾಸ್ ಶೆಟ್ಟಿ |
| ತಂದೆ ಹೆಸರು | ಃ | ಸದಾಶಿವ ಶೆಟ್ಟಿ |
| ಪ್ರಾಯ | ಃ | 49 ವರ್ಷ |
| ಉದ್ಯೋಗ | ಃ | ಕೆಲಸ ಇರುವುದಿಲ್ಲ |
| ವಾಸ | ಃ | ಗೋಳಿ ಹೊಳೆ , ಬೈಂದೂರು |

ದಿನಾಂಕ **: 23.05.2025** ರಂದು ಪಿಡಬ್ಲ್ಯೂ - 1/ಸಿಡಬ್ಲ್ಯೂ - 1 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಹಿರಿಯ ಸ.ಸ.ಅ. ರವರಿಂದಃ

ಈಗ ನ್ಯಾಯಾಲಯದಲ್ಲಿ ಇರುವ 1 ನೇ ಆರೋಪಿಯ ಪರಿಚಯ ಇರುವುದಿಲ್ಲ. ಸುಭಾಷ್ ಚಂದ್ರ ಶೆಟ್ಟಿಯವರ ಪರಿಚಯ ಇರುವುದಿಲ್ಲ. ಚಾಸಾ 2 ರವರ ಪರಿಚಯ ಇರುವುದಿಲ್ಲ. ಬಾಷಿ ರವರ ಪರಿಚಯ ಇರುವುದಿಲ್ಲ. ಈ ಪ್ರಕರಣಕ್ಕೆ ಸಂಬಧಿಸಿದಂತೆ ಪೋಲೀಸರು ಸಹಿ ಹಾಕಲು ಹೇಳಿದ ಕಾರಣ ನಾನು ಸಹಿ

ಹಾಕಿದ್ದು, ನನಗೆ ಘಟನೆ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಫೆಬ್ರವರಿ 2024 ರಲ್ಲಿ ನಾನು 2 ನೇ ಆರೋಪಿಗೆ ಸೇರಿದ ದುರ್ಗಾ ಕನ್ಸ್ಟ್ರಕ್ಷನ್ಸ್ ನಲ್ಲಿ ಕೆಲಸ ಮಾಡುತ್ತಿದ್ದೆ. ಪೋಲೀಸರು ಹೇಳಿದಂತೆ ಠಾಣೆಯಲ್ಲಿ ಸಹಿ ಮಾಡಿದ್ದು, ದೂರಿನಲ್ಲಿ ನನ್ನ ಸಹಿಯನ್ನು ಗುರುತಿಸಿದ ಕಾರಣ, ದೂರನ್ನು ನಿಪಿ - 1 ಎಂದು ಗುರುತಿಸಲಾಯಿತು. ನನ್ನ ಸಹಿಯನ್ನು ನಿಪಿ - 1(ಎ) ಎಂದು ಗುರುತಿಸಲಾಯಿತು. ನಿಪಿ - 1 ನ್ನು ನಾನೇ ಬರೆದಿದ್ದು, ಪೋಲೀಸರ ಹೇಳಿದ ಹಾಗೆ ಬರೆದಿದ್ದೇನೆ. 2 ನೇ ಆರೋಪಿಗೆ ಸೇರಿದ ಗಾಡಿ ಅಪಘಾತವಾಗಿದೆ ಎಂದು ಪೋಲೀಸರು ತಿಳಿಸಿದ್ದು, ಅದರಲ್ಲಿ ಬಾಷಿಯವರಿಗೆ ಡಿಕ್ಕಿ ಪಡಿಸಿದ್ದಾರೆ ಎಂದು ತಿಳಿಸಿದ್ದಾರೆ. ನಾನು ಆ ಸಮಯದಲ್ಲಿ ಸ್ಥಳದಲ್ಲಿ ಇದ್ದೆ ಎಂದು ನಿಪಿ - 1 ರಲ್ಲಿ ಬರೆದಿದ್ದೇನೆ. ಆ ಸಮಯದಲ್ಲಿ ನಾನು ಹೆಬ್ರಿ ಪೇಟೆಯಲ್ಲಿ ಇದ್ದೆ. ಘಟನೆ ಬಗ್ಗೆ ಮಾಹಿತಿ ಇರುವುದಿಲ್ಲ. ಈಗ ತೋರಿಸಿದ ಮಹಜರು ಮತ್ತು ನಕಾಶೆಯಲ್ಲಿ ನನ್ನ ಸಹಿ ಇದ್ದು, ಮಹಜರನ್ನು ನಿಪಿ - 2 ಎಂದು, ನಕಾಶೆಯನ್ನು ನಿಪಿ - 3 ಎಂದು ಗುರುತಿಸಲಾಯಿತು. ನನ್ನ ಸಹಿಗಳನ್ನು ಕ್ರಮವಾಗಿ ನಿಪಿ - 2(ಎ) ಮತ್ತು ನಿಪಿ - 3(ಎ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ನಾನು ಠಾಣೆಯಲ್ಲಿ ಮಾಡಿದ್ದೇನೆ. ನಿಪಿ - 2 ಮತ್ತು ನಿಪಿ - 3 ರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ತಿಳಿದಿಲ್ಲ. 2 ಫೋಟೋಗಳನ್ನು ತೋರಿಸಿದ್ದು, ಅದರಲ್ಲಿ ನಾನು ಇದ್ದೇನೆ ಎಂದು ಗುರುತಿಸಿಕೊಂಡ ಕಾರಣ, 2 ಫೋಟೋಗಳನ್ನು ಕ್ರಮವಾಗಿ ನಿಪಿ - 4 ಮತ್ತು ನಿಪಿ - 5 ಎಂದು ಗುರುತಿಸಲಾಯಿತು. ಘಟನಾ ಸ್ಥಳದಲ್ಲಿ ತೆಗೆದಿದ್ದು, ಅಪಘಾತವಾಗಿದೆ

ಎಂದು ಪೋಲೀಸರು ಹೇಳಿದ್ದು, ಅವರು ಹೇಳಿದಂತೆ ನಾನು ಫೋಟೋಗಳಿಗೆ ನಿಂತಿದ್ದೇನೆ. ವಾಹನ ಬಿಡುಗಡೆ ಮಹಜರಿನಲ್ಲಿ ನನ್ನ ಸಹಿ ಇದ್ದು , ಅದನ್ನು ನಿಪಿ - 6 ಎಂದು ಗುರುತಿಸಲಾಯಿತು. ನನ್ನ ಸಹಿಯನ್ನು ನಿಪಿ - 6(ಎ) ಎಂದು ಗುರುತಿಸಲಾಯಿತು. ನಿಪಿ - 6 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಮಹಜರನ್ನು ಠಾಣೆಯಲ್ಲಿ ಮಾಡಿರುತ್ತಾರೆ.

ಈ ಹಂತದಲ್ಲಿ ಸಾಕ್ಷಿದಾರರನ್ನು ಬಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಬೇಕು ಎಂದು ಹಿರಿಯ.ಸ.ಸ.ಅ. ರವರು ಕೋರಿದ್ದು, ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.

<u>ಪಾಟೀ ಸವಾಲುಃ</u> ಹಿರಿಯ ಸ.ಸ.ಅ. ರವರಿಂದಃ

ನಾನು 2024 ರಲ್ಲಿ 2 ನೇ ಆರೋಪಿಗೆ ಸೇರಿದ ದುರ್ಗಾ ಕನ್ಸ್ಟ್ರಕ್ಷನ್ ನಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೆ. ಅವರ ಕಂಪನಿಯಲ್ಲಿ ಚಾಸಾ 2 ಮತ್ತು ಮೃತ ಬಾಷಿಯವರು ಸೂಪರ್ ವೈಸರ್ ಆಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. 1 ನೇ ಆರೋಪಿಯು ಸದರಿ ಕಂಪನಿಯ ಕಾಂಕ್ರೀಟ್ ಮಿಕ್ಸರ್ ವಾಹನದ ಚಾಲಕನಾಗಿ ಕೆಲಸ ಮಾಡುತ್ತಿದ್ದರು ಎಂದರೆ ನಾನು ಅದರ ಬಗ್ಗೆ ತಿಳಿದುಕೊಂಡಿದ್ದೇನೆ.

**CC 208/2024**
**CW1**
**PW1**

ನಮ್ಮ ಕಂಪನಿಯಿಂದ ಪಡುಕೂಳೂರು ಗ್ರಾಮದ ಕೊಡಮಣಿತ್ತಾಯ ದೇವಸ್ಥಾನದಿಂದ ಮುಖ್ಯ ರಸ್ತೆಯವರಗೆಗೆ ಕಾಂಕ್ರಿಟ್ ರಸ್ತೆ  ಕಾಮಗಾರಿಯಲ್ಲಿ ಮಾಡುತ್ತಿದ್ದೆವು ಎಂದರೆ ಸರಿ.  ದಿಃ 14.02.2024 ರಂದು ನಾನು, ಚಾಸಾ 2, ಮೃತ ಬಾಷಿಯವರು ಹಾಗೂ 1 ನೇ ಆರೋಪಿಯು ಕೆಲಸದಲ್ಲಿದ್ದೆವು ಎಂದರೆ ಸರಿಯಲ್ಲ. ನಾನು ಸದರಿ ಸ್ಥಳದಲ್ಲಿ ಇರಲಿಲ್ಲ. ಸದರಿ ದಿನ ಸಂಜೆ 4.15 ರ ಸಮಯದಲ್ಲಿ 1 ನೇ ಆರೋಪಿಯು ಸರಿಯಾಗಿ ನೋಡದೇ ನಿರ್ಲಕ್ಷ್ಯತನದಿಂದ ಕಾಂಕ್ರಿಟ್ ಮಿಕ್ಸರ್ ವಾಹನವನ್ನು ಹಿಂದಕ್ಕೆ ಚಲಾಯಿಸಿಕೊಂಡು ಬಂದಿದ್ದು, ಆ ಸಮಯದಲ್ಲಿ ಅಲ್ಲಿ ನಿಂತಿದ್ದಂತಹ ಬಾಷಿಯವರಿಗೆ ಡಿಕ್ಕಿ ಹೊಡೆದು, ಅವರು ತೀವ್ರ ಗಾಯಗೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಂತರ ನಾವೆಲ್ಲರೂ ಸೇರಿ ಬಾಷಿಯವರನ್ನು ಹೆಬ್ರಿ ಸರಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿರುತ್ತೇವೆ ಎಂದರೆ ಸರಿಯಲ್ಲ. ಚಿಕಿತ್ಸೆ ಮಾಡಿದ ವೈದ್ಯರು ಅವರನ್ನು ಪರೀಕ್ಷಿಸಿ, ಮೃತರಾಗಿದ್ದಾರೆ ಎಂದು ತಿಳಿಸಿರುತ್ತಾರೆ ಎಂದರೆ, ನಾನು ಆಸ್ಪತ್ರೆಗೆ ಹೋಗಿರುವುದಿಲ್ಲ. ಈ ವಿಚಾರವಾಗಿ ನಾನು ರಾತ್ರಿ 8.10 ರ ಸಮಯದಲ್ಲಿ ಠಾಣೆಗೆ ಹಾಜರಾಗಿ , ನನ್ನ ಕೈಯಾರೆ ನಿಪಿ - 1 ನ್ನು ಬ ರೆದು, ಆರೋಪಿತರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಅಪಘಾತವನ್ನು ನಾನು ಪ್ರತ್ಯಕ್ಷವಾಗಿ ನೋಡಿದ್ದರೂ ಸಹಾ , ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

CC 208/2024
CW1
PW1

ದಿಃ 15.02.2024 ರಂದು ಪೋಲೀಸರು ಅಪಘಾತದ ಸ್ಥಳಕ್ಕೆ ಬಂದಿದ್ದು, ನಾನು ಸ್ಥಳವನ್ನು ತೋರಿಸಿದ್ದು, ಚಾಸಾ 3 ಮತ್ತು 4 ರವರ ಸಮಕ್ಷಮ ಪೋಲೀಸರು ಬೆಳಗ್ಗೆ 9 ರಿಂದ 10 ಗಂಟೆಯ ವರಗೆ ನಿಪಿ - 2 ರಂತೆ ಮಹಜರನ್ನು ಜರುಗಿಸಿ, ಸ್ಥಳದಲ್ಲಿ ನಿಪಿ - 3 ರಂತೆ ನಕಾಶೆ ತಯಾರಿಸಿ, ನಿಪಿ - 4 ಮತ್ತು ನಿಪಿ - 5 ರಂತೆ ಫೋಟೋ ತೆಗೆದಿರುತ್ತಾರೆ ಎಂದರೆ ಸರಿ. ಆದರೆ ಠಾಣೆಯಲ್ಲಿ ಮಹಜರು ತಯಾರಿಸಿರುತ್ತಾರೆ. ಅದೇ ಸಮಯದಲ್ಲಿ ಅಪಘಾತಪಡಿಸಿದ ವಾಹನ ಮತ್ತು ರಕ್ತದ ಮಾದರಿಗಳನ್ನು ಪೋಲೀಸರು ವಶಪಡಿಸಿಕೊಂಡಿರುತ್ತಾರೆ ಎಂದರೆ, ಅದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಂತರ ದಿಃ12.04.2024 ರಂದು ನನ್ನನ್ನು ಮತ್ತು ಚಾಸಾ 2 ರವನ್ನು ಪೋಲೀಸರು ಠಾಣೆಗೆ ಕರೆಸಿ, ನ್ಯಾಯಾಲಯದ ಆದೇಶದ ಪ್ರಕಾರ ವಾಹನವನ್ನು 2 ನೇ ಆರೋಪಿಗೆ ಬಿಡುಗಡೆ ಮಾಡಿ , ನಿಪಿ - 6 ರಂತೆ ಮಧ್ಯಾಹ್ನ 12 ರಿಂದ 12.30 ರವರೆಗೆ ಮಹಜರು ತಯಾರಿಸಿ, ನಮ್ಮ ಸಹಿ ಪಡೆದಿರುತ್ತಾರೆ ಎಂದರೆ, ನನಗೆ ಅದರ ಬಗ್ಗೆ ಸರಿಯಾಗಿ ನೆನಪಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹಾ , ಆರೋಪಿತರು ನನಗೆ ಪರಿಚಯಸ್ಥರಾಗಿದ್ದು, ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**CC 208/2024**
**CW1**
**PW1**

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ ಇರುವುದಿಲ್ಲ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,

ಕಾರ್ಕಳ.